(ಶ್ರೀ ಕೊಣಂದೂರು ಲಿಂಗಪ್ಪ)

ನಾವು ವಿಶಾಲ ಮನೋಭಾವ ಎಂಬ ಹೆಸರಿನಲ್ಲಿ ಸಹಿಸಿಕೊಂಡಿದ್ದಾಯಿತು. ಮತ್ತು ನಮ್ಮ ಮನೆಗೆ ಬೆಂಕಿ ಹಚ್ಚಿಕೊಂಡು ಊರಿಗೆ ಬೆಳಕನ್ನು ತೋರಿಸಿ ವಿಶಾಲ ಮನೋಭಾವವನ್ನು ತೋರಿಸಿದ್ದಾಯಿತು. ಇನ್ನು ಮುಂದೆಯೂ ಇದನ್ನು ಸಹಿಸಿಕೊಂಡಿರುವುದಕ್ಕೆ ಸಾಧ್ಯವಿಲ್ಲ. ಕನ್ನಡ ಓದುವ, ಬರೆಯುವ ಮತ್ತು ಮಾತನಾಡುವ ಜನರಿಗೆ ಮೊದಲು ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ಮತ್ತು ರಿಜರ್ವ್ ಬ್ಯಾಂಕ್‌ನಲ್ಲಿ ಕೆಲಸ ಸಿಗುವಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ತಾವು ಈ ರೀತಿ ಮಾತನಾಡುತ್ತಾ ಹೋದರೆ ಯಾರು ಉತ್ತರ ಕೊಡಬೇಕು ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಸದನ ನಡೆಯುವ ಕಾಲದಲ್ಲಿ ಮಂಖ್ಯ ಮಂತ್ರಿಗಳು ಇರಬೇಕು.

ಅಧ್ಯಕ್ಷರು.—ಅವರಿಗೂ ಸಹ ಬೇಕಾದಷ್ಟು ಕೆಲಸವಿರುತ್ತದೆ. ತಾವು ನೋಟೀಸ್ ಕೊಡದೆ ಪ್ರಸ್ತಾಪ ಮಾಡಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಸಭೆ ನಡೆಯುವಾಗ ಅವರು ಸಭೆಯಲ್ಲಿ ಇರಬೇಕಾತ್ತದೆ.

ಅಧ್ಯಕ್ಷರು.—ಅದು ಆನ್‌ಚಾರಿಟಿಬಲ್. ತಾವು ನೋಟೀಸ್ ಕೊಟ್ಟೂ ಸಹ ಅವರು ಬರದಿದ್ದರೆ, ಅದು ತಪ್ಪು ಎಂದು ಹೇಳುವ ಜವಾಬ್ದಾರಿ ನನ್ನದು. ಆದರೆ ಇಲ್ಲಿ ಮಾನ್ಯ ಸದಸ್ಯರು ತಟಕ್ಕನೆ ಎದ್ದೇನಿಂತುಕೊಂಡು ಏನಾದರು ಹೇಳಿಬಿಟ್ಟರೆ ಯಾರು ಉತ್ತರ ಕೊಡುತ್ತಾರೆ ?

ಶ್ರೀ ಕೊಣಂದೂರು ಲಿಂಗಪ್ಪ.—ಜಂಟೀ ಜವಾಬ್ದಾರಿ ಇರುವುದರಿಂದ, ಬೇರೆ ಯಾರಾದರೂ ಮಂತ್ರಿಗಳು ಉತ್ತರ ಕೊಡಬಹುದು.

ಅಧ್ಯಕ್ಷರು.—ಇನ್ನು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳೋಣ.

MYSORE LAND REFORMS (Amendment) BILL, 1973 AS REPORTED BY THE J. S. C.

[—Consideration of Clauses (Debate Continue]

CLAUSE 14

MADAM SPEAKER.—Let us take up Legislative business now.

There is an amendment by Sri T. R. Shamanna. The Member is absent. So, I will now put it to the vote of the House.

The question is :

"That Clause 13 do stand part of the Bill."

The motion was adopted

Clause 13 was added to the Bill.

CLAUSE 14

MADAM SPEAKER.—I will put Clause 14 to the vote of the House. There are no amendments.

The question is :

"That Clause 14 do stand part of the Bill."

The motion was adopted

Clause 14 was added to the Bill.

CLAUSE 15

MADAM SPEAKER.—The question is :

"That Clause 15 do stand part of the Bill.

The motion was adopted

Clause 15 was added to the Bill.

CLAUSE 16

MADAM SPEAKER.—There is an Amendment given notice by the Hon. Minister for Revenue he will please move it.

2—00 P.M.

SRI N. HUTCHMASTHYGOWDA:—Madam, I beg to move

"That sub-clause (1) shall be renumbbered as sub-clause (2) and before the clause as so renumbered, the following clause shall be substituted, namely —

"(1) in sub-section (1), for clause (e), the following clause shall be substituted, namely —

"(*e*) if any question arises regarding the apportionment of the rent payable by the sharer it shall be decided by the Tahsildar.

Provided that if any question of law is involve the Tahsildar shall refer it to the Court. On receipt of such reference the Court shall after giving notice to the parties concerned, try the question as expeditiously as possible and record finding thereon and send the same to the Tahsildar. The Tahsildar shall then give the decision in accordance with the said finding."

MADAM SPEAKER:—Motion moved.

"That Sub-Clause (1) shall be renumered, as sub-clause (2) and before the clause as so renumbered, the following clause shall be substituted, namely.

"(1) in sub-section (1), for clause (e), the following clause shall be substituted, namely.

"(*e*) if any question arises regarding the apportionment of the rent payable by the sharer it shall be decided by the Tahsildar.

"Provided that if any question of law is involved the Tahsildar shall refer it to the Court. On receipt of such reference the Court shall after giving notice to the parties concerned, try the question as expeditiously as possible and record finding thereon and send the same to the Tahsildar. The Tahsildar shall then give the decision in accordance with the said finding"

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಸಾಮಾನ್ಯವಾಗಿ ಟಿನೆಂಟ್ ಆದವನು ಭೂಮಿಯನ್ನು ಸಬ್‌ಲೆಟ್ ಮಾಡುವುದಕ್ಕಾಗಲೀ, ಅಥವಾ ಡಿವೈಡ್ ಮಾಡುವುದಕ್ಕಾಗಲೀ ಅವಕಾಶ ಇರುವುದಿಲ್ಲ. ಜಮೀನು ಪಾರ್ಟಿಷನ್ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ಈ ಸಂದರ್ಭದಲ್ಲಿ ಅವರು ಗೇಣಿಯನ್ನು ಯಾವ ರೀತಿ ಕೊಡಬೇಕು ಎಂಬ ಬಗ್ಗೆ ಕಾನೂನಿನ ಪ್ರಶ್ನೆ ಉಂಟಾದರೆ ತಹಶೀಲ್ದಾರರು ಅದನ್ನು ಕೋರ್ಟ್‌ಗೆ ತಿಳಿಸಿದಾಗ ಕೋರ್ಟಿನವರು ಇಂತಿಂಥವರು ಇಷ್ಟಿಷ್ಟು ಭಾಗ ಕೊಡಬೇಕಾಗುತ್ತದೆ ಎನ್ನುವುದನ್ನು ತೀರ್ಮಾನ ಮಾಡಿ ತಹಶೀಲ್ದಾರರಿಗೆ ಕಳುಹಿಸಿಕೊಡುತ್ತಾರೆ. ಆ ಮೇಲೆ ತಹಶೀಲ್ದಾರರು ಅದರಂತೆ ಗೇಣಿಯ ಬಗ್ಗೆ ಒಂದು ತೀರ್ಮಾನವನ್ನು ಕೊಡುವುದಕ್ಕೆ ಅವಕಾಶವಾಗಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಇದು ಅವಶ್ಯಕವಾಗಿ ಆಗಬೇಕಾಗಿದೆ. ಆದ್ದರಿಂದ ಇದಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:—ಸೆಕ್ಷನ್ ೨೧ರಲ್ಲಿ ಏನಿದೆ ಎಂದರೆ ಪರ್ಮನೆಂಟ್ ಟಿನೆಂಟ್ ಆದರೆ ಅವನು ಭೂಮಿಯನ್ನು ಸಬ್‌ಲೆಟ್ ಕೊಡುವುದಕ್ಕೆ ಅವನಿಗೆ ವಿನಾಯ್ತಿ ಇದೆ. ಆದರೆ ರೈತರು ವಿಭಾಗ ಮಾಡಿ ಕೊಂಡರೆ ಇದು ಅನ್ವಯಿಸುವುದಿಲ್ಲ. ೪—೫ ಜನ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರತಕ್ಕ ಸಂದರ್ಭದಲ್ಲಿ ಸಬ್ ಡಿವಿಜನ್, ಸಬ್‌ಲೆಟಿಂಗ್ ಆಗಬಾರದು. ಅವರಿಗೆ ಆಕ್ಯುಪೆನ್ಸಿ ರೈಟ್ ಸಿಕ್ಕಬೇಕು. ಆ ರೀತಿ ಸೂಕ್ತ ಬದಲಾವಣೆ ಮಾಡಬೇಕು ಎಂದು ತೀರ್ಮಾನವಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಅವಶ್ಯಕ ಬಂದಾಗ ಅದನ್ನು ನೋಡೋಣ.

MADAM SPEAKER:—I shall put it to vote. The question is:—

"That Sub-Clause (1) shall be renumbered as sub-clause (2) and before the clause as so renumbered, the following clause shall be substituted, namely.—

(1) in sub-section (1), for clause (e), the following clause shall be substituted, namely.—

"(*e*) if any question arises regarding the apportionment of the rent payable by the sharer it shall be decided by the Tahsildar.

Provided that if any question of law is involved the Tahsildar shall refer it to the Court. On receipt of such reference the Court shall after giving notice to the parties concerned, try the question as expeditiously as possible and record finding thereon and send the same to the Tahsildar. The Tahsildar shall then give the decision in accordance with the said finding".

The motion was adopted

MADAM SPEAKER:—The question is.—

"That clause 16, as amended, do stand part of the Bill".

The motion was adopted

Clause 16, as amended, was added to the Bill.

CLAUSES 17 to 19

MADAM SPEAKER:—The question is.—

"That Clauses 17 to 19, both inclusive do stand part of the Bill".

The motion was adopted

Clauses 17 to 19, both inclusive were added to the Bill.

CLAUSE 20

SRI N. HUTCHMASTHYGOWDA:—Madam Speaker, I beg to move

"That in the proposed Section 25

(1) in sub-section (1), after the words "No. tenant", the words "of a soldier or seaman" shall be inserted".

(*ii*) in sub-section (3), after the words "to any person", the words "if possession thereof is not claimed by the soldier or the seaman for personal cultivation" shall be inserted".

MADAM SPEAKER:—Amendment moved.—

"That in the proposed section 25.

(*i*) in sub-section (1), after the words ',no tenant", the words "of a soldier or seaman" shall be inserted.

(*ii*) in sub section (3), after the words "to any person", the words "if possession thereof is not claimed by the soldier or the seaman for personal cultivation" shall be inserted.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಇದರಲ್ಲಿ ಸೀಮನ್ ಆಗಲೀ ಅಥವಾ ಸೋಲ್ಜರ್ ಆಗಲೀ ಭೂಮಿಯಂನ್ನು ಗೇಣಿಗೆ ಕೊಟ್ಟಿರುವ ಸಂದರ್ಭದಲ್ಲಿ ಅವರು ಅದನ್ನು ಸ್ವಂತ ಸಾಗುವಳಿಗೆ ಬೇಕು ಎಂದು ಕೇಳದಿದ್ದರೆ, ಆ ಭೂಮಿಯನ್ನು ಸರ್ಕಾರಕ್ಕೆ ಸರೆಂಡರ್ ಮಾಡಬೇಕು ಎಂದು ಇದೆ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:—ಗೇಣಿದಾರನು ಜಮೀನನ್ನು ಬಿಟ್ಟು ಕೊಡುವ ಕಾಲದಲ್ಲಿ ಜಮೀನನ್ನು ಮಾರತಕ್ಕ ಅವಕಾಶ ಇತ್ತು. ಈಗ ಜಮೀನ್ದಾರ ಆ ಜಮೀನನ್ನ ಮಾರತಕ್ಕದ್ದು ಇಲ್ಲ ಎಂದರೆ ಸರೆಂಡರ್ ಮಾಡುವ ಕಾಗೆ ಮಾತ್ರ ಮಾಡಬೇಕು. ಆ ರೀತಿ ಸರೆಂಡರ್ ಆಗುವ ಕಾಲದಲ್ಲಿ ರೈತರಿಗೆ ಜಮೀನು ಬೇಡ ಎಂದರೆ, ಅದನ್ನು ವಾಪಸ್ಸು ಕೊಡಬೇಕಾಗುತ್ತದೆ. ಇದರಲ್ಲಿ ಕೇವಲ ಸೀಮನ್ ಮತ್ತು ಸೋಲ್ಜರ್‌ಗಳಿಗೆ ಸಂಬಂಧಪಟ್ಟ ಗೇಣಿದಾರರು ಮಾತ್ರ ಸರ್ಕಾರಕ್ಕೆ ಜಮೀನನ್ನು ಸರೆಂಡ್ ಮಾಡಬೇಕಾಗುತ್ತದೆ. ಉಳಿದ ರೈತರೂ ಸರೆಂಡರ್ ಮಾಡಬೇಕಾದ್ದರೆ ಪ್ರಶ್ನೆ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:...ಅದು ಬೇರೆ ಕ್ಲಾಜಿನಲ್ಲಿ ಬರುತ್ತದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಈಗ ಪ್ರೊವಿ ಕ್ಲಾಸ್ ಓದಿದರೆ ಅದು ಹೀಗೆ ಅರ್ಥವಾಗುತ್ತದೆ : No tenant *of a soldier or a seaman* shall surrender any land held by him as tenant except in favour of the State Government ;

ಯಾವ ಟೆನೆಂಟಿಗಾದರೂ ಸರ್ಕಾರಕ್ಕೆ ಅಲ್ಲದೆ ಬೇರೆ ಯಾರಿಗೂ ಜಮೀನನ್ನು ಬಿಟ್ಟು ಕೊಡುವ ಹಾಗೆ ಇಲ್ಲ. ಈಗ ಸೋಲ್ಜರ್ಸ್, ಅಂಡ್ ಸೀಮೆನ ಅವರ ಟೆನೆಂಟ್ ಯಾರಿದ್ದಾರೆ. ಅವರ ವಿಚಾರ ಇಲ್ಲಿ ಬರಬೇಕಾದರೆ, ಸೆಕ್ಷನ್ ಹಾಗೆ ಇಟ್ಟು ಅದನ್ನು ಒಂದು ಪ್ರೊವಿಸೋದ ಹಾಗೆ ಮಾಡಿ ಸೇರಿಸಬೇಕಲ್ಲದೆ ಈ ರೀತಿಯಲ್ಲಿ ಅಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೆಕ್ಷನ್ ೭೭—ಮತ್ತು ೭೫ರಲ್ಲಿ ಅದು ಇದೆ. ವೆಸ್ಟಿಂಗ್ ಆಫ್ ದಿ ಲ್ಯಾಂಡ್ ಎಂದು ಇದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಇದು ಪ್ರೊವಿಸೋದ ಹಾಗೆ ಬರಬೇಕು.

ಶ್ರೀ ಎನ್. ಪುಟ್ಟಮಾಸ್ತಿಗೌಡ.—ಇಲ್ಲಿ ಸೀಮೆನ ಮತ್ತು ಸೋಲ್ಜರ್ಸ್‌ಗೆ ಸರೆಂಡರ್ ಮಾಡಬೇಕಾದುದು ಮುಖ್ಯ ವಿಷಯ. ಅವನು ಸರೆಂಡರ್ ಮಾಡಬೇಕಾದರೆ, ಆತನನ್ನು ಹೆದರಿಸಿ ತೆಗೆದುಕೊಳ್ಳುವ ಸಂದರ್ಭ ಬರಬಹುದು. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಅವನು ಸರ್ಕಾರಕ್ಕೆ ಸರೆಂಡರ್ ಮಾಡಬೇಕೆಂದು ಮಾಡಿರುವುದು. ಮುಂದೆ ಯಾವ ರೀತಿ ಮಾಡಬೇಕೆಂಬುದು ಅದರಲ್ಲಿ ಬರುತ್ತದೆ.

SRI KAGODU THIMMAPPA Original section 25 says: "No tenant shall surrender any land held by him.....except with the previous permission in writing of the Court".

ಹಿಂದೆ ಟೆನೆಂಟ್ ಆಗಿರತಕ್ಕವನು ಸರೆಂಡರ್ ಮಾಡುವಾಗ ಏನು ಕ್ರಮ ಅನುಸರಿಸಬೇಕೆಂದು ಇದೆ, ಅದರಲ್ಲಿ ಜಮೀನ್ದಾರನು ಸಹ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಅದಕ್ಕೆ ಬದಲು ರೈತ ಸರೆಂಡರ್ ಮಾಡಬೇಕಾದರೆ ಕೋರ್ಟಿಗೆ ಅರ್ಜಿ ಹಾಕಬೇಕಾಗಿತ್ತು. ಅವನು ಸರೆಂಡರ್ ಮಾಡಬೇಕಾದರೆ ಸರ್ಕಾರಕ್ಕೆ ಮಾಡಬೇಕಲ್ಲದೆ ಬೇರೆ ಯಾರಿಗೂ ಅಲ್ಲ. ಆದ್ದರಿಂದ ಸೋಲ್ಜರ್ಸ್ ಮತ್ತು ಸೀಮೆನ್‌ಗಳಿಗೆ ಸಂಬಂಧಪಟ್ಟ ಜಮೀನನ್ನು ಗೇಣಿದಾರ ಸರೆಂಡರ್ ಮಾಡತಕ್ಕೆ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಡಬೇಕೆಂದು ತಾವು ಅವಕಾಶ ಮಾಡಿದ್ದೀರಿ.

ಅದಕ್ಕೆ ಒಂದು ಪ್ರೊವಿಸೋ ಮಾಡಬೇಕಲ್ಲದೆ ಈ ರೀತಿ ಮಾಡಿದ್ದು ಸರಿಯಲ್ಲ. ಆದ್ದರಿಂದ ನಿಮ್ಮ ಅಮೆಂಡ್‌ಮೆಂಟ್ ಅದರ ಉದ್ದೇಶವನ್ನೇ ಡಿಫೀಟ್ ಮಾಡುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ತಿಮ್ಮಪ್ಪನವರು ಮತ್ತು ಕಕ್ಕಿಲ್ಲಾಯರವರು ಮಾಡಿದ ಮಾದವನ್ನು ಕೇಳಿದೆ. ಸೀಮೆನ್ ಮತ್ತು ಸೋಲ್ಜರ್ಸ್‌ಗೆ ಒಂದು ವಿನಾಯಿತಿಯಾಗಿ ಈ ಕ್ಲಾಸ್ ಕಡೆಯಲ್ಲಿ ಸೇರಿಸಿದರೆ ಅನುಕೂಲವಾಗುತ್ತದೆ, ಇಲ್ಲಿ ಸೇರಿಸುವುದರಿಂದ ಅನಾನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಅದನ್ನು ಬಗೆಹರಿಸುವುದಕ್ಕೋಸ್ಕರ ಇದರ ತಿದ್ದುಪಡಿಯನ್ನು ಕೊನೆಯಲ್ಲಿ ತಿಳಿಸುತ್ತೇನೆ. ದಯವಿಟ್ಟು ಈ ಕ್ಲಾಸನ್ನು ಆಮೇಲೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದನ್ನು ಆಮೇಲೆ ತೆಗೆದುಕೊಳ್ಳೋಣ. ಈಗ ಬಾಕಿ ಅಮೆಂಡ್‌ಮೆಂಟ್ ಸಹ ಬಂದಿಲ್ಲ.]

ಶ್ರೀ ಸಿ. ಬೈರೇಗೌಡ ಈ ಅಸೆಂಬ್ಲಿ ಮೂರುವರೆ ತಿಂಗಳಿಂದ ನಡೆಯುತ್ತಿದೆ. ನೀವು ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ಜನರು ಕೇಳುತ್ತಿದ್ದಾರೆ. ಇನ್ನೂ ಸಹ ಎಷ್ಟು ದಿವಸ ಇದು ಮುಂದುವರಿಯುತ್ತದೆ ಎಂದು ಹೇಳಬೇಕು. ಇದರಿಂದ ಬಹಳ ಕಷ್ಟವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ:—ಈಗ ಒಂದು-ಒಂದೂವರೆ ಗಂಟೆ ಆರ್ನ್ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಇನ್ನೂ ಪಾರ್ಟಿಯಲ್ಲಿ ಹಲವಾರು ವಿಷಯಗಳ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲ. ತಾವು ಅಮೆಂಡ್‌ಮೆಂಟ್ ಕೊಟ್ಟಮೇಲೆ ಅದಕ್ಕೆ ಪ್ರತಿ ಅಮೆಂಡ್‌ಮೆಂಟುಗಳನ್ನು ಕೊಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ, ನೀವು ಇದನ್ನು ಪೀಸ್‌ಮಿಲಾಗಿ ಮಾಡಿ ಸದಸ್ಯರನ್ನು ಗೊಂದಲಕ್ಕೆ ಈಡು ಮಾಡುವ ಬದಲು ಸಭೆಯನ್ನು ಒಂದು ವಾರ ಕಾಲ ಮುಂದಕ್ಕೆ ಹಾಕಿ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಿದ್ದುಪಡಿಗಳು ಪೂರ್ಣವಾಗಿ ಸೈಕ್ಲೋಸ್ಟೈಲ್ ಆಗುತ್ತಾ ಇವೆ. ನಮ್ಮ ಪಕ್ಷದಲ್ಲಿ ಎಲ್ಲ ತೀರ್ಮಾನವಾಗಿ ತಿದ್ದುಪಡಿಗಳನ್ನು ಮಾಡಿದ್ದೇವೆ. ಇನ್ನು ಏನೂ ಉಳಿದಿಲ್ಲ. ಸೈಕ್ಲೋಸ್ಟೈಲ್ ಆದಮೇಲೆ ಮಾನ್ಯ ಸದಸ್ಯರು ಅದನ್ನು ನೋಡಿ ತಿದ್ದುಪಡಿಗಳನ್ನು ಕೊಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ. ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಅಧ್ಯಕ್ಷರೇ ಅದನ್ನು ತೀರ್ಮಾನ ಮಾಡಬಹುದು.

ಅಧ್ಯಕ್ಷರು.—ಈ ಚರ್ಚೆ [ನಾಳೆಯ ದಿವಸ ಮುಗಿಯಬೇಕು. ಇವತ್ತು ಇರತಕ್ಕ ಅಮೆಂಡ್‌ಮೆಂಟುಗಳು ಟೈಪಾಗಿ ಬರುವುದಕ್ಕೆ ಇನ್ನೂ ಒಂದೂವರೆ ಗಂಟೆ ಕಾಲ ಬೇಕಾಗುತ್ತದೆ. ಆಮೇಲೆ ತಾವು ಅಮೆಂಡ್‌ಮೆಂಟ್ಸ್ ಕೊಡಬೇಕಾದರೆ ಇನ್ನೂ ಒಂದೆರಡು ಘಂಟೆಗಳು ಆಗಬಹುದು, ಅಲ್ಲಿಗೆ ನಾಲ್ಕುವರೆ ಗಂಟೆಯಾಗುತ್ತದೆ. ಆದ್ದರಿಂದ ನಾಳೆ ಎರಡು ಹೊತ್ತು ಸಭೆ ಕೂತುಕೊಳ್ಳುವುದಕ್ಕೆ ಒಪ್ಪಿಕೊಂಡರೆ ಎಲ್ಲವೂ ಸರಿಹೋಗುತ್ತದೆ ಆದ್ದರಿಂದ ಈಗ ಸಭೆಯನ್ನು ಅಡ್ಜರ್ನ್ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಕೊಡುವುದು ಇದೇ ಕೊನೆಯ ತಿದ್ದುಪಡಿಯಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎದುರಿನ ಪಕ್ಷದ ನಾಯಕರು ಮತ್ತು ಇತರೇ ಸದಸ್ಯರು ಒಂದು ವಿಚಾರವನ್ನು ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ತಿದ್ದುಪಡಿ ತಂದಿರುವುದು ಸ್ವಲ್ಪ ತಡವಾಗಿದೆ. ಆದಕ್ಕಾಗಿ ಈ ಸಭೆಯ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ನಾವು ನಮ್ಮ ತಿದ್ದುಪಡಿಗಳನ್ನು ಸೈಕ್ಲೊಸ್ಟೈಲ್ ಮಾಡಿಕೊಟ್ಟ ಮೇಲೆ ಅದಕ್ಕೆ ನೀವು ತಿದ್ದುಪಡಿಗಳನ್ನು ಸೂಚಿಸಬೇಕಾದರೆ ಕಾಲಾವಕಾಶ ಬೇಕಾಗುತ್ತದೆ. ಅದಕ್ಕೋಸ್ಕರ ಅಧ್ಯಕ್ಷರ ಸಲಹೆಯು ಮೇರೆಗೆ ಬೆಳಗ್ಗೆ ಮತು ಸಾಯಂಕಾಲ ಕೂತುಕೊಂಡು ಇವನ್ನು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗ ನಮ್ಮ ತಿದ್ದುಪಡಿಗಳು ಎಲ್ಲವೂ ಸಿದ್ಧವಾಗಿವೆ.

SRI C.M. ARMUGHAM —When you, Madam, make a suggestion we cannot say 'no' to it; we will agree with it. But our difficulty is that Government has made up its mind as to what are the amendments they want to bring.

MADAM SPEAKER.—They are ready and are being cyclostyled.

SRI C. M. ARMUGHAM.—Even if they are final, we will require some time to suggest amendments to amendments. We have a very strong objection to this. Are the persons who compose the present Government discharging their duties as responsible members of the Cabinet ? I may submit to you, Madam, that it will be very difficult for us to function in this House if they are to behave in this fashion. A doubt arises in our minds whether the Government is really serious about this Land Reforms Bill.

MADAM SPEAKER.—Otherwise, they would not have brought it at all.

†SRI C. M. ARUMUGHAM.—Madam, it was solely on account of your suggestion that we agreed yesterday to postpone the discussion on the Land Reforms Bill. In the meantime a grave thing has happened and that is some pujaris, mathadtipathii and jagadgurus have come to Bangalore and prevailed upon the Government and Ministers to give exemption to temple lands. They want to water down the provisions of the Bill to such as extent that it will be nothing but a skeleton of the previous Act. I do not know what is the good of passing this Bill and I do not know to whom they are going to entrust this Bill when it becomes an Act for implementation. I think we are wasting the time of the House. Let us not waste the time of the House and public money. We have been very Co-operative for your sake. Sri Devegowda has been strictly following the path of an Opposition Leader but yesterday some-how or other he voted with the Government. This Bill is not going to help the people. I want to know from the Government to what extent the religious and charitable institutions and societies will be permitted to hold lands. I may warn the Government that if they allow them to hold lands to

(Sri C. M. Arumugham)

any extent, then the Opposition will have to block the passage of this Bill. They cannot promise one thing during election and do another thing thereafter. They are changing today what they have said yesterday. I want the Government to give this information either now or when we meet tomorrow.

ಶ್ರೀ ಕಾಗೋಡು ತಿಮ್ಮಪ್ಪ.—ನಾಳೆ ಅದನ್ನು ತೆಗೆದುಕೊಳ್ಳುವುದಕ್ಕೆ ನನ್ನ ಆಭ್ಯಂತರವೇನೂ ಇಲ್ಲ. ಈ ಮಧ್ಯೆ ನಮಗೆ ಒಂದು ಭಯ ಎನಿಸಿದೆಯೆಂದರೆ, ನಮ್ಮ ಮುಂಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಬೇರೆಯವರ ಕೈಗೆ ಸಿಕ್ಕಿದರೆ ಮತ್ತೆ ಎನಾಗುತ್ತದೋ ಎಂಬುದು. ಅವರು ಸೂಚಿಸುವ ತಿದ್ದುಪಡಿಗಳು ಜಾಗ್ರತೆಯಾಗಿ ಈ ಸದನದ ಮುಂದೆ ಬಂದರೆ ಸಾಕು. ನಾನು ನಿನ್ನೆಯಿಂದ ನೋಡಿರುವ ಹಾಗೆ ಅವರು ಎಷ್ಟೋ ಕಸರತ್ ಮಾಡಿ ಈ ತಿದ್ದುಪಡಿಗಳನ್ನು ತಂದಿದ್ದಾರೆ. ಇನ್ನೂ ಲಾಬಿಯಲ್ಲಿ ಕೆಲವು ಸದಸ್ಯರ ಜೊತೆಯಲ್ಲಿ ವಿಚಾರ ಮಾಡುತ್ತಿದ್ದಾರೆ. ಆದ್ದರಿಂದ ಅವರಿಬ್ಬರನ್ನೂ ಎಲ್ಲಾದರೂ ಲಾಕಪ್ಪಿನಲ್ಲಿ ಹಾಕಿ ಯಾರ ಕೈಗೂ ಸಿಕ್ಕದ ಹಾಗೆ ಮಾಡಬೇಕು. ಯಾರ ಕೈಗೂ ಸಿಕ್ಕಬಾರದು. ಸಿಕ್ಕಿದರೆ ಏನಾಗುತ್ತದೋ ಎಂದು ಭಯವಾಗುತ್ತಿದೆ. ಬೇರೆಯವರ ಕೈಗೆ ಅವರು ಸಿಕ್ಕಿದರೆ ಇನ್ನಷ್ಟು ತಿದ್ದುಪಡಿಗಳು ಬರುತ್ತವೊ ಎಂದು ಭಯವಿದೆ. ಇಂತಹ ಸಂದರ್ಭದಲ್ಲಿ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಮುಖ್ಯವಾಗಿ ಈ ಮಸೂದೆಯಲ್ಲಿರತಕ್ಕ ಬಹು ಮುಖ್ಯಾಂಶಗಳು ಬಿದ್ದುಹೋಗುವುದಕ್ಕೆ ಅವಕಾಶ ಆಗಬಾರದೆಂದು ನಾನು ಹೇಳುತ್ತೇನೆ. ಅವೆಲ್ಲವೂ ಪಾಸಾಗಬೇಕು.

†ಶ್ರೀ ಎಚ್. ಡಿ. ದೇವೇಗೌಡ.—ನನ್ನ ವಿಸ್ತರಾದಂಥ ಮಾನ್ಯ ಶ್ರೀ ಆರ್ಮುಗಂ ಅವರು ನಿನ್ನೆ ಕ್ಲಾಜು (೩)ರ ಬಗ್ಗೆ ಒಂದು ತಿದ್ದುಪಡಿಯನ್ನು ಸರ್ಕಾರದವರು ಮಂಡಿಸಿದಾಗ ಮಾತನಾಡುತ್ತ, ನಾನು ವಿರೋಧಪಕ್ಷದ ನಾಯಕನಾಗಿ ಆ ತಿದ್ದುಪಡಿಗೆ ಒಪ್ಪಿಗೆ ಕೊಟ್ಟೆ ಎಂಬುದಾಗಿ ಆಪಾದನೆ ಮಾಡಿದ್ದಾರೆ. ನಾನು ಇದರ ಬಗ್ಗೆ ಒಂದೆ ಸ್ಪಷ್ಟೀಕರಣ ಮಾಡುತ್ತೇನೆ, ನಿನ್ನೆ ಒಂದು ತಿದ್ದುಪಡಿಯನ್ನು ಈ ಸಭೆಯ ಮುಂದೆ ಮಂಡಿಸಿದಾಗ ಒಂದು ಹೋಲ್ಡಿಂಗ್ ಅಂದರೆ, ೧೦ ಎಕರೆ ಎಂದು ಒಂದು ಇನಸ್ಟಿಟ್ಯೂಷನ್ನಿಗೆ ಅವರು ಮಿತಿ ಇಟ್ಟಿದ್ದಾರೆ. ಆದರೆ ಸಂತಃ ಲೇಬರರ್ಸ್ ಇಟ್ಟುಕೊಡಲು ಕೆಲಸ ಮಾಡಿಕೊಳ್ಳುವುದಾದರೆ ಜೆನಿಯಿನ್ ಇನಸ್ಟಿಟ್ಯೂಷನ್‌ಗಳಿಗೆ ಅದೇ ತರಹ ಬಿಡತಕ್ಕ ಅಭಿಪ್ರಾಯವನ್ನು ಹೇಳಿದರು. ಆದರೆ ಪತ್ರಿಕೆಯಲ್ಲಿ ನೋಡಿದಾಗ ಈ ಬಗ್ಗೆ ಯಾವುದೇ ಲಿಮಿಟ್ ಇಲ್ಲ, ೨-೩ ಸಾವಿರ ಎಕರೆಗಳನ್ನು ಅಂತಹವರು ಇಟ್ಟುಕೊಳ್ಳುವ ಹಾಗೆ ಇದೆಯೆಂದು ಪತ್ರಿಕೆಗಳ ವರದಿ ಆಗಿದೆ.

2-30 P.M.

ನೆನ್ನೆ ದಿವಸ ಓಟಿಗೆಹಾಕಿದ ತಿದ್ದುಪಡಿ ಏನಿದೆ ಅದರಬಗ್ಗೆ ನನ್ನ ಪ್ರತಿಕ್ರಿಯೆ ಇಷ್ಟೇ. ನೆನ್ನೆಯ ದಿವಸ ನಾನು ಅದಕ್ಕೆ ನನ್ನ ಸಮ್ಮತಿಯನ್ನು ಏಕೆ ಕೊಟ್ಟೆನೆಂದರೆ—ಆ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಮಾನ್ಯ ರೆವಿನ್ಯೂ ಸಚಿವರು ಈ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್‌ಗಳಿಗೆ—ವಿದ್ಯಾ ಸಂಸ್ಥೆಗಳಿಗೆ ಒಂದು ವಿನಾಯಿತಿಯನ್ನು ಕೊಟ್ಟಿದ್ದಾರೆ, ಅದು ಈಗ ಆ ದೇವಾಲಯಗಳಿಗೆ ಕೊಡುತ್ತಿರುವ ಆನ್ಯೂಯಿಟ್ ಏನಿದೆ ಅದು ಅಲ್ಲಿನ ಕೆಲಸಕಾರ್ಯಗಳಿಗೆ ಸಾಧ್ಯವಿರುವುದರಿಂದ ಈಗ ಅವುಗಳಿಗೂ ಕೂಡ ಒಂದು ಸೀಲಿಂಗ್ ಲಿಮಿಟ್ಟಿನಲ್ಲಿ ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶವನ್ನು ಈ ತಿದ್ದುಪಡಿಯಲ್ಲಿ ಮಾಡಿಕೊಡಲಾಗಿದೆಯೆಂದು ಮಾನ್ಯ ಸಚಿವರು ಹೇಳಿದಂತೆ ನಾನು ಅರ್ಥಮಾಡಿಕೊಂಡು ಅದಕ್ಕೆ ನನ್ನ ಒಪ್ಪಿಗೆಯನ್ನು ಕೊಟ್ಟೆ. ಆದರೆ ಈ ದಿವಸ ಪ್ರಜಾವಾಣಿ ಪತ್ರಿಕೆಯನ್ನು ಬೆಳಿಗ್ಗೆ ಓದಿದಾಗ ಅದರಲ್ಲಿ ಈ ಸಂಸ್ಥೆಗಳು ಎಷ್ಟು ಬೇಕಾದರೂ ಭೂಮಿಯನ್ನು ಇಟ್ಟುಕೊಳ್ಳಬಹುದೆಂದು ಬರೆದಿದೆ. ಅದನ್ನು ಓದಿ ನನಗೆ ಬಹಳ ಘಾಬರಿಯಾಯಿತು. ಆದರೆ ಆ ಪತ್ರಿಕೆಯಲ್ಲಿ ಬರೆದಿರುವುದೇ ನಿಜವಾದ ಪಕ್ಷದಲ್ಲಿ ನಾನೂ ಕೂಡ ಇತರೇ ವಿರೋಧಪಕ್ಷಗಳ ಜೊತೆಯಲ್ಲಿ ಅದರ ಬಗ್ಗೆ ಬಲವಾದ ಪ್ರತಿಭಟನೆ ಮಾಡುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಕೂಡಲೆ ತಮ್ಮ ನಿಲುವಿನಿಂದ ಎಂಬುದನ್ನು ಈ ದಿವಸವೇ ತಿಳಿಸಬೇಕೆಂದು ಹೇಳುತ್ತೇನೆ. ಆದರೆ ಆ ಸಂಸ್ಥೆಗಳ ಬಗ್ಗೆ ಬಿಡತಕ್ಕ ಭೂಮಿ ಮಿತಿ ಎಷ್ಟಿರುತ್ತದೆಂಬುದರ ತಿದ್ದುಪಡಿ ಇನ್ನೂ ನಮ್ಮ ಕೈಸೇರಿಲ್ಲ.

ಅಧ್ಯಕ್ಷರು.—ಸರ್ಕಾರದ ತಿದ್ದುಪಡಿಗಳು ಇನ್ನು ಅರ್ಧಗಂಟೆಯೊಳಗೆ ಬರುತ್ತವೆ. ಅವುಗಳನ್ನು ತಮಗೆಲ್ಲರಿಗೂ ಹಂಚಲಾಗುವುದು. ಅದಾದನಂತರ ಬಾಕಿ ಸದಸ್ಯರುಗಳು ಅವರವರ ತಿದ್ದುಪಡಿಗಳನ್ನು ಈ ದಿವಸ ಸಾಯಂಕಾಲ ನಾಲ್ಕು ಗಂಟೆಯೊಳಗೆ ನಮ್ಮ ಆಫೀಸಿಗೆ ತಲುಪುವಂತೆ ಕಳುಹಿಸಬೇಕು.

ಶ್ರೀ ಎನ್ ಹುಚ್ಚವಾಸ್ಪಿಗೌಡ.— ಪತ್ರಿಕೆಗಳಲ್ಲಿ ಏನೇ ಹೇಳಿಕೆಗಳು ಬರಲಿ. ಆದರೆ ಅಂತಿಮ ತೀರ್ಮಾನ ತೆಗೆದುಕೊಳ್ಳತಕ್ಕ ಹಕ್ಕು ಈ ಮಾನ್ಯ ಸಭೆಗೆ ಸೇರಿದ್ದು. ನಾನು ನೆನ್ನೆಯ ದಿವಸ ಪರ್ಸನಲ್ ಕ್ಲಿಪೇಷನ್ ಎಂದರೆ ನನು ಎಂಬ ವ್ಯಾಖ್ಯೆಯ ಬಗ್ಗೆ ವಿವರಣೆಯನ್ನು ಮಾತ್ರ ಕೊಟ್ಟಿದ್ದೇನೆ. ಮುಂದೆ ಸರ್ಕಾರದವರು ತರತಕ್ಕ ತಿದ್ದುಪಡಿಯಲ್ಲಿ ಆ ಭೂಮಿತಿ ಎಷ್ಟಿರಬೇಕೆಂಬುದನ್ನು ತಿಳಿಸಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ — ಮಾನ್ಯ ಕಂದಾಯ ಸಚಿವರು ಒಂದು ಕುಟುಂಬ ಎಂದರೇನು ಎಂಬುದರ ಅರ್ಥ ವಿವರಣೆಯಲ್ಲಿ ಅದಕ್ಕೆ ಇರಬೇಕಾದ ಭೂಮಿತಿಯನ್ನು ನಾಳೆ ಹೇಳುತ್ತೇನೆಂದು ಹೇಳುತ್ತಿದ್ದಾರೆ. ಏಕೋ ಇವರ ವರ್ತನೆಗಳ ಹಜ್ಜೆ ಹಜ್ಜೆಗೂ ಅನುಮಾನಾಸ್ಪದವಾಗುತ್ತಿದೆ. ಆ ಮಠಾಧಿಪತಿಗಳಾದರೋ ದಡ್ಡಿನ ಗಟ್ಟನ್ನು ಕಟ್ಟಿಕೊಂಡು ಬೆಂಗಳೂರಿನಲ್ಲಿ ತಿರುಗುತ್ತಿದ್ದಾರೆ.

SRI D. DEVARAJA URS (Chief Minister).—It is highly unfair to those people as well as to us.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಮೇಲೆ ಆ ಅಕ್ಷತೆ ಕಾಳು ಬಿದ್ದರೆ ಏನಾಗಂತ್ತದೋ.

ಶ್ರೀ ಡಿ. ದೇವರಾಜ ಅರಸ್.—ನಮ್ಮನ್ನು ಅಕ್ಷತೆ ಕಾಳಿಗೆ ಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನೀವು ಇಲ್ಲಿ ಏನೇ ಒಪ್ಪಿದರೂ ಮನೆಯಲ್ಲಿ ನೀವು ಒಪ್ಪಿದ್ದಕ್ಕೆ ಮನೆಯಲ್ಲಿರುವ ಹೆಂಗಸರು ಒಪ್ಪುವುದಿಲ್ಲ. ಆಂದಾಗ ನಾವು ಇಲ್ಲಿ ನಿಮ್ಮ ಅಭಿಪ್ರಾಯಗಳಿಗೆ ಗೌರವ ಕೊಟ್ಟಾಗ ತಾವು ಕೂಡ ನಮ್ಮ ಅಭಿಪ್ರಾಯಗಳಿಗೆ ಮನ್ನಣೆ ಕೊಡಬೇಕು.

ಶ್ರೀ ಎಸ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ: ನೆನ್ನೆಯದಿನದ ಪತ್ರಿಕೆಯಲ್ಲಿ ಶ್ರೀ ಹಾವನೂರು ಮತ್ತು ಇತರರು ಕೊಟ್ಟಿರತಕ್ಕ ಹೇಳಿಕೆಯಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಅಪಾದನೆಗಳನ್ನು ಮಾಡುವುದರಲ್ಲಿ ಅವರು ಒಹಳ ಮುಂದೂ ಹೋಗಿದ್ದಾರೆ. ಆ ವಿಚಾರದಲ್ಲಿ ನಾನು ಒಂದು ಪ್ರಿವಿಲೇಜ್ ಮೋಷನ್ನನ್ನು ತಮ್ಮ ಕಡೆಗೆ ಕಳುಹಿಸಿದ್ದೇನೆ. ತಾವು ಅದನ್ನು ಆಡ್ಮಿಟ್ ಮಾಡುವುದಕ್ಕೆ ಮುಂಚೆ ಇಲ್ಲಿ ಅದರಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಯಾರಾದರೂ ಅವರವರ ಅಭಿಪ್ರಾಯವನ್ನು ಹೇಳಿದರೆ ಅದರಲ್ಲಿ ಪ್ರಿವಿಲೇಜ್ ಮೋಷನ್ ಪ್ರಶ್ನೆ ಹೇಗೆ ಉದ್ಭವವಾಗುತ್ತದೆ? ಇದರಲ್ಲಿ ಪ್ರಿವಿಲೇಜ್ ಮೋಷನ್ ತರುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ದಯಮಾಡಿ ತಮ್ಮ ರೂಲಿಂಗ್ ಕೊಡುವುದಕ್ಕೆ ಮುನ್ನ ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

MADAM SPEAKER.—The House will now rise and meet tomorrow **at 9 A. M.**

The House adjourned at Thirty Eight minutes past two of the Clock to meet again at Nine of the Clock on Thursday, the 31st May 1973.

WD 20372—GPB—550—22-8-1973